ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಯು. ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2439 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 22-03-2022 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿ ಜಾರಿಯಲ್ಲಿರುವ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿನ ಯೋಜನೆಗಳಾವುವು: | ಪ್ರಸ್ತುತ ರಾಜ್ಯದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರ ಈ ಕೆಳಕಂಡಂತಿವೆ:-<br><br>**<u>ಕೈಮಗ್ಗ ನೇಕಾರರು:-</u>**<br>1) ನೇಕಾರ್ ಸಮ್ಮಾನ್ ಯೋಜನೆ.<br>2) ಕೈಮಗ್ಗ ನೇಕಾರರಿಗೆ ಸ್ಟೈಫಂಡ್ ತರಬೇತಿ.<br>3) ಮೃತ ಕೈಮಗ್ಗ ನೇಕಾರರ ಅಂತ್ಯ ಸಂಸ್ಕಾರದ ವೆಚ್ಚ ಮರುಪಾವತಿ.<br>4) ನಬಾರ್ಡ್ ಪುನರ್ಧನ ಯೋಜನೆಯಡಿ ಬಡ್ಡಿ ಸಹಾಯಧನ.<br>5) ಮಿತವ್ಯಯ ನಿಧಿ ಯೋಜನೆ.<br>6) ಸಹಕಾರ ಬ್ಯಾಂಕ್‌ಗಳು ನೀಡಿದ ಶೇ.1ರ ಮತ್ತು ಶೇ.3ರ ಸಾಲದ ಮೇಲೆ ಬಡ್ಡಿ ಸಹಾಯಧನ.<br>7) ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ಶೇ.20 ರಿಬೇಟ್ ಯೋಜನೆ.<br>8) ಕೈಮಗ್ಗ ವಿಕಾಸ ಯೋಜನೆ.<br>9) ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿಗೆ ರೂ.15/- ರ ಸಹಾಯಧನ ನೀಡುವುದು.<br>10) ಕೈಮಗ್ಗ ಮತ್ತು ಸಲಕರಣೆಗಳ ಸರಬರಾಜು.<br>11) ಕೈಮಗ್ಗಗಳಿಗೆ ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವುದು.<br><br>**<u>ವಿದ್ಯುತ್ ಮಗ್ಗ ನೇಕಾರರು:-</u>**<br>1. 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.<br>2. ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ.<br>3. ಮಗ್ಗ ಪೂರ್ವ ಸೌಲಭ್ಯ.<br>4. ಸೈಜಿಂಗ್ ಘಟಕ ಸ್ಥಾಪನೆ.<br>5. ಮಿನಿ ಪವರ್‌ಲೂಮ್ ಪಾರ್ಕ್.<br>6. 1 ರಿಂದ20 ಹೆಚ್.ಪಿ ವರೆಗಿನ ವಿದ್ಯುತ್ ಘಟಕಗಳಿಗೆ ವಿದ್ಯುತ್ ಸಬ್ಸಿಡಿ.<br>7. 150 ಹೆಚ್.ಪಿ.ವರೆಗಿನ ಹೆಚ್.ಟಿ. ವಿದ್ಯುತ್ ಸಂಪರ್ಕ ಹೊಂದಿರುವ ರೇಪಿಯರ್/ಲಾಳಿರಹಿತ ವಿದ್ಯುತ್ ಮಗ್ಗ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಬ್ಸಿಡಿ.<br>8. ಕೋವಿಡ್ ಪರಿಹಾರ ಧನ.<br>9. ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆ. |

| | | |
|---|---|---|
| | | 10. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ.<br>11. ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.2/- ಸಹಾಯಧನ.<br>12. ಸಹಕಾರಿ ನೂಲಿನ ಗಿರಣಿಗಳು ಭಾರತೀಯ ಹತ್ತಿ ನಿಗಮ (Cotton Corporation of India)ದಿಂದ ಖರೀದಿಸಿದ ಹತ್ತಿಯ ಮೌಲ್ಯದ ಮೇಲೆ ಶೇ.5 ರಷ್ಟು ಸಹಾಯಧನ.<br>13. ಜವಳಿ ನೀತಿ ಯೋಜನೆಯಡಿ ಜವಳಿ ಉದ್ದಿಮೆದಾರರಿಗೆ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ಯೋಜನೆಯಡಿ ರಿಯಾಯಿತಿ ಹಾಗೂ ಪ್ರೋತ್ಸಾಹನಧನ ನೀಡಲಾಗುವುದು. |
| ಆ) | ಕೈಮಗ್ಗ ಮತ್ತು ಜವಳಿ ಉದ್ಯಮ ಕ್ಷೇತ್ರದ ಅಭಿವೃದ್ಧಿಗೆ ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳೇನು; | ಸಿದ್ಧ ಉಡುಪು ಮತ್ತು ಜವಳಿ ನೀತಿ ಯೋಜನೆಯಡಿಯಲ್ಲಿ ಜವಳಿ ಘಟಕಗಳಿಗೆ ಈ ಕೆಳಕಂಡ ರಿಯಾಯಿತಿ/ ಪ್ರೋತ್ಸಾಹನಗಳನ್ನು ನೀಡಲಾಗುವುದು:-<br>• ಸಾಲಾಧಾರಿತ ಬಂಡವಾಳ ಸಹಾಯಧನ<br>• ಬಡ್ಡಿ ಸಹಾಯಧನ<br>• ವಿದ್ಯುಚ್ಛಕ್ತಿ ಮರುಪಾವತಿ ಸಹಾಯಧನ<br>• ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ<br>• ವೇತನ ಸಹಾಯಧನ<br>• ಮುದ್ರಾಂಕ ಶುಲ್ಕ ವಿನಾಯಿತಿ & ನೋಂದಣಿ ಶುಲ್ಕ ರಿಯಾಯಿತಿ.<br>• ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ<br><br>ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ. |
| ಇ) | ಈ ವಲಯದಲ್ಲಿ ದುಡಿಯುತ್ತಿರುವ ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆದಾರರಿಗೆ ನೀಡುತ್ತಿರುವ ಪ್ರೋತ್ಸಾಹಗಳೇನು? | ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆದಾರರಿಗೆ ನೀಡುತ್ತಿರುವ ಪ್ರೋತ್ಸಾಹನಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

ಸಂ: **CI 126 JAKE 2022**

(ಶಂಕರ ಬಿ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು

ಅನುಬಂಧ

## ಕೈಮಗ್ಗ ವಲಯದ ಯೋಜನೆಗಳು

- **ಕೈಮಗ್ಗ ವಿಕಾಸ ಯೋಜನೆ**
  ರಾಜ್ಯದ ಕೈಮಗ್ಗ ವಲಯದಲ್ಲಿ ಕೈಮಗ್ಗಗಳು ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಲಿ ಇರುವ ನೇಕಾರರು ಕೈಮಗ್ಗ ನೇಯ್ಗೆ ವೃತ್ತಿಯನ್ನು ಮುಂದುವರಿಸಿ ಅಭಿವೃದ್ಧಿ ಪಡಿಸಿಕೊಳ್ಳಲು ಹಾಗೂ ಯುವ ನೇಕಾರರನ್ನು ಕೈಮಗ್ಗ ನೇಯ್ಗೆ ವೃತ್ತಿಯೆಡೆಗೆ ಆಕರ್ಷಿಸುವ ಉದ್ದೇಶದಿಂದ ಹತ್ತಿ / ರೇಷ್ಮೆ / ಉಣ್ಣೆ ಕ್ಷೇತ್ರದಲ್ಲಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇಕಡ 50 ರಷ್ಟು ಸಹಾಯಧನ ಒದಗಿಸುವುದು.

- **ಕೈಮಗ್ಗಗಳಿಗೆ ನ್ಯೂಮ್ಯಾಟಿಕ್ / ಮೋಟರೈಸ್‌ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವುದು.**
  ಪ್ರಸ್ತುತ ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ನೇಕಾರರ ಹೆಚ್ಚಿನ ಪರಿಶ್ರಮವನ್ನು ತಪ್ಪಿಸಿ ಹೆಚ್ಚಿನ ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ಅನುಕೂಲವಾಗುವಂತೆ **ನ್ಯೂಮ್ಯಾಟಿಕ್ / ಮೋಟರೈಸ್‌ಡ್ ಜಕಾರ್ಡ್** ಸಲಕರಣೆಗಳ ಕಿಟ್ ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸುವುದು.

- **ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡುವುದು.**
  ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ನೂಲಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡಲಾಗುವುದು.

- **ನಬಾರ್ಡ್ ಪುನರ್ಧನ ಯೋಜನೆಯಡಿ ಬಡ್ಡಿ ಸಹಾಯಧನ**
  ನೇಕಾರ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಮೂಲಕ ನಬಾರ್ಡ್ ಪುನರ್ಧನ ಯೋಜನೆಯಡಿ ದುಡಿಮೆ ಬಂಡವಾಳಕ್ಕಾಗಿ ಪಡೆಯುವ ಸಾಲದ ಮೇಲೆ ಶೇ.3 ರ ಬಡ್ಡಿ ಸಹಾಯಧನವನ್ನು ಇಲಾಖಾ ವತಿಯಿಂದ ನೀಡಲಾಗುತ್ತಿದೆ.

- **ಸಹಕಾರ ಬ್ಯಾಂಕ್‌ಗಳು ನೀಡಿದ 1 % ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ**
  ನೇಕಾರರ ಸಹಕಾರ ಸಂಘಗಳು / ಕೃಷಿಯೇತರ ಪತ್ತಿನ ಸಹಕಾರ ಸಂಘಗಳು / ಪಟ್ಟಣ ಸಹಕಾರ ಬ್ಯಾಂಕ್‌ಗಳಿಂದ ರೂ.2.00 ಲಕ್ಷಗಳ ವರೆಗೆ ಶೇಕಡ 1 ರ ಬಡ್ಡಿ ದರದಲ್ಲಿ ಸಾಲ ಹಾಗೂ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳ ವರೆಗೆ ಶೇಕಡ 3 ರ ಬಡ್ಡಿ ದರದಲ್ಲಿ ನೀಡಿದ ಸಾಲಕ್ಕೆ ರಾಜ್ಯ ಸರ್ಕಾರವು ಬಡ್ಡಿ ಸಹಾಯಧನ ನೀಡಲಾಗುವುದು.

- **ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ಶೇ.20 ರಿಬೇಟ್ ಯೋಜನೆ**
  2018-19 ನೇ ಸಾಲಿನಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇಕಡಾ 20 ರಿಬೇಟ್ ಅನ್ನು ವರ್ಷದ 365 ದಿನಗಳಿಗೆ (ವರ್ಷ ಪೂರ್ತಿ) ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ಶೇಕಡ 20 ರಿಬೇಟ್‌ನ್ನು ರಾಜ್ಯ ಸರ್ಕಾರ ವತಿಯಿಂದ ಮರುಪಾವತಿಸಲಾಗುವುದು.

- **ಮಿತವ್ಯಯ ನಿಧಿ ಯೋಜನೆ**
  ಈ ಯೋಜನೆಯಡಿ ನೇಕಾರರಿಗೆ ಉಳಿತಾಯ ಪ್ರವೃತ್ತಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಮಜೂರಿಯಿಂದ ಶೇಕಡ 8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇಕಡ 8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತ ಶೇಕಡ 12 ರ ಬಡ್ಡಿಯನು ನೀಡಲಾಗುವುದು. ಈ ಯೋಜನೆಯ ಮೊಬಲಗಿನಡಿ ಫಲಾನುಭವಿಗಳ ಮದುವೆ, ಮನೆ ನಿರ್ಮಾಣ, ವೈದ್ಯಕೀಯ ವೆಚ್ಚ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂಗಡವನ್ನು ಪಡೆಯಬಹುದಾಗಿದೆ.

- **ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ**
  ಉಣ್ಣೆ ವಲಯದ ಪುನಶ್ಚೇತನಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಉಣ್ಣೆ ಕತ್ತರಿಸುವ ಯಂತ್ರ, ಉಣ್ಣೆ ಕತ್ತರಿಸುವ ಟೇಬಲ್ / ಪೀಠೋಪಕರಣ, ಉಣ್ಣೆ ಸಾಗಣಿಕೆ ವಾಹನ, ಕಾರ್ಡಿಂಗ್ ಮೆಷಿನ್ ಖರೀದಿಸಲು ಹಾಗೂ ಉಣ್ಣೆ ಸಂಗ್ರಹಣ ಉಗ್ರಾಣ, ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಿಸಲು ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಒದಗಿಸಲಾಗುವುದು.

- **ಕೈಮಗ್ಗಗಳ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಒದಗಿಸುವುದು.**
  ಪ್ರಸ್ತುತ ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ಹಳೆಯ ಯಾಂತ್ರಿಕ ಜಕಾರ್ಡ್‌ಗಳ ಬದಲಾಗಿ ಹೊಸ ಮಾದರಿಯ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಬಳಸುವುದರಿಂದ ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.೯೦ ರಷ್ಟು ಸಹಾಯಧನವನ್ನು ಒದಗಿಸುವುದು.

<u>**ಜವಳಿ ವಲಯದ ಯೋಜನೆಗಳು**</u>

**ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಫಲಾನುಭವಿಗಳು ಸ್ವಯಂ ಉದ್ಯೋಗ ಕೈಗೊಂಡು ಸಮಾಜದ ಮುಖ್ಯವಾಹಿನಿಗೆ ಬರಲು ಅನುಕೂಲವಾಗುವಂತೆ ಫಲಾನುಭವಿ / ಸಮುದಾಯ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.**

<u>**ಫಲಾನುಭವಿ ಆಧಾರಿತ ಯೋಜನೆಗಳ ವಿವರ**</u>

1. **02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ**
   2011-12ನೇ ಸಾಲಿನ ಆಯವ್ಯಯದಲ್ಲಿ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸುವ ಒಂದು ಹೊಸ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಪ್ರತಿ ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಲಾಗಿರುತ್ತದೆ.
   - ಘಟಕ ವೆಚ್ಚ ರೂ.3.00 ಲಕ್ಷ
   - ಸರ್ಕಾರದ ಸಹಾಯಧನ :
     – ಸಾಮಾನ್ಯ ವರ್ಗ – ಶೇ.50 ಗರಿಷ್ಠ ರೂ.1.50 ಲಕ್ಷ / ಬ್ಯಾಂಕ್ ಸಾಲ – ಶೇ.50
     – ಪ.ಜಾ/ಪ.ಪಂ – ಶೇ.೯೦ ಗರಿಷ್ಠ ರೂ.2.70 ಲಕ್ಷ / ಬ್ಯಾಂಕ್ ಸಾಲ / ಫಲಾನುಭವಿ ವಂತಿಕೆ – ಶೇ.10
2. **ಎಲೆಕ್ಟ್ರಾನಿಕ್ ಜಕಾರ್ಡ್**
   ಹಾಲಿ ಕಾರ್ಯನಿರತ ವಿದ್ಯುತ್ ಮಗ್ಗಗಳಲ್ಲಿ ವಿನ್ಯಾಸವನ್ನು ಪ್ರತಿ ಬಾರಿ ಬದಲಾಯಿಸಲು ಪ್ರತಿಯೊಂದು ಬಾರಿ ಯಾಂತ್ರಿಕ ಸೆಟ್ಟಿಂಗ್ ಬದಲಾಯಿಸಬೇಕಾಗುತ್ತದೆ. ಆದ್ದರಿಂದ ಈ ತೊಂದರೆಯನ್ನು ತಪ್ಪಿಸಲು ಹಾಗೂ ಕನಿಷ್ಠ ವೆಚ್ಚದಲ್ಲಿ ಹೆಚ್ಚಿನ ವಿನ್ಯಾಸಗಳನ್ನು ಪಡೆಯಲು ಎಲೆಕ್ಟ್ರಾನಿಕ್ ಜಕಾರ್ಡ್‌ನ್ನು ಪರಿಚಯಿಸಲಾಗಿದೆ. ಇದು ಸೀರೆಗಳಲ್ಲಿ ವಿವಿಧ ಡಿಸೈನ್‌ಗಳನ್ನು ಅಳವಡಿಸಲು ಅನುಕೂಲವಾಗಿದೆ.
   - ಘಟಕ ವೆಚ್ಚ ರೂ.4.50 ಲಕ್ಷ
   - ಸರ್ಕಾರದ ಸಹಾಯಧನ :
     – ಸಾಮಾನ್ಯ ವರ್ಗ – ಶೇ.50 ಗರಿಷ್ಠ ರೂ.2.25 ಲಕ್ಷ / ಬ್ಯಾಂಕ್ ಸಾಲ – ಶೇ.50
     – ಪ.ಜಾ/ಪ.ಪಂ – ಶೇ.೯೦ ಗರಿಷ್ಠ ರೂ.4.05 ಲಕ್ಷ / ಬ್ಯಾಂಕ್ ಸಾಲ – ಶೇ.10
3. **ಕೈಮಗ್ಗ ಮತ್ತು ಸಲಕರಣೆಗಳ ಖರೀದಿಗೆ ಸಹಾಯಧನ**
   - ಘಟಕ ವೆಚ್ಚ ರೂ.30,000/- ಗಳು
   - ಸರ್ಕಾರದ ಸಹಾಯಧನ – ಪ.ಜಾ/ ಪ.ಪಂ – ಶೇ.೯೦ ಗರಿಷ್ಠರೂ.27,000/- ಮತ್ತು ಫಲಾನುಭವಿ ವಂತಿಕೆ – ರೂ.3,000/-

4. **ವಿದ್ಯುತ್ ರಿಯಾಯಿತಿ ಸಹಾಯಧನ ;**

01 ರಿಂದ 20 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿದ್ದು, ಉಳಿಕೆ ಮೊಬಲಗನ್ನು ಸರ್ಕಾರವು ಭರಿಸುತ್ತಿದೆ.

5. **ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ – ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಸ್ಥಾಪನೆಗೆ ಸಹಾಯಧನ.**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಸಂಘ ಸಂಸ್ಥೆಗಳು / ಕಂಪನಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು. ಸಂಘ ಸಂಸ್ಥೆಗಳು ಜವಳಿ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಜವಳಿ ಸಹಕಾರ ಸಂಘ / ಎನ್.ಜಿ.ಓ / ಟ್ರಸ್ಟ್ / ಸಂಸ್ಥೆಗಳು ನೊಂದಾಯಿಸಿ 03 ವರ್ಷವಾಗಿರಬೇಕು.
ಎಸ್.ಎಂ.ಇ ಘಟಕದ ಸಹಾಯಧನದ ಮೊತ್ತವನ್ನು ಯೋಜನಾ ವೆಚ್ಚದ ಶೇ. 75 ರಷ್ಟು ಅಥವಾ ಗರಿಷ್ಠ ರೂ.2.00 ಕೋಟಿಗಳಿಗೆ ಸೀಮಿತಗೊಳಿಸಲಾಗಿರುತ್ತದೆ. ಹಣಕಾಸು ಸಂಸ್ಥೆಗಳಿಂದ ಶೇ. 4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆದಿದಲ್ಲಿ, ಇಲಾಖೆಯು ಬಡ್ಡಿ ಸಹಾಯಧನ ನೀಡುವುದಿಲ್ಲ. ಆದರೆ, ಹಣಕಾಸು ಸಂಸ್ಥೆಗಳಿಂದ ಶೇ. 4 ರ ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇದ್ದಲ್ಲಿ, ಗರಿಷ್ಠ ರೂ. 75.00 ಲಕ್ಷಗಳ ಅವಧಿ ಸಾಲದ ಮೇಲೆ 05 ವರ್ಷಗಳ ಅವಧಿಗೆ ಜವಳಿ ನೀತಿಯನ್ವಯ ಬಡ್ಡಿ ಸಹಾಯಧನವನ್ನು ಮರು ಸಂದಾಯ ಮಾಡಲಾಗುವುದು. (ಸಹಾಯಧನವನ್ನು ಯೋಜನೆಯ ಪ್ರಗತಿಯನ್ನಾದರಿಸಿ ಗರಿಷ್ಠ 04 ಕಂತುಗಳಲ್ಲಿ (Back end) ರೂಪದಲ್ಲಿ ಪ್ರೋರೇಟಾ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು).

6. **150 ಹೆಚ್.ಪಿ.ವರೆಗಿನ ಹೆಚ್.ಟಿ. ವಿದ್ಯುತ್ ಸಂಪರ್ಕ ಹೊಂದಿರುವ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸುವುದು:**

150 ಹೆಚ್.ಪಿ. ವರೆಗಿನ ವಿದ್ಯುತ್ ಸಂಪರ್ಕ ಪಡೆದ ರೇಪಿಯರ್ / ಲಾಳ ರಹಿತ ಏರ್‌ಜೆಟ್ ವಿದ್ಯುತ್‌ಮಗ್ಗಗಳ ಎಂ.ಎಸ್.ಎಂ.ಇ. ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನವನ್ನು ಒದಗಿಸಲಾಗುವುದು.

<u>ಸಹಕಾರ ಸಂಘ / ಸಂಸ್ಥೆಗಳಿಗೆ ನೀಡುವ ಸೌಲಭ್ಯಗಳ ವಿವರ</u>

1. **ಮಿನಿ ಪವರ್‌ಲೂಮ್ ಪಾರ್ಕ್**

ನೊಂದಾಯಿತ ಎಸ್.ಪಿ.ವಿ/ಸಂಘ ಸಂಸ್ಥೆಗಳಿಗೆ ಈ ಯೋಜನೆಯಡಿ ಪ್ರಯೋಜನ ಒದಗಿಸಲಾಗುವುದು.

- ಘಟಕ ವೆಚ್ಚ & ಸರ್ಕಾರದ ಸಹಾಯಧನ :
  - ಸಾಮಾನ್ಯ ವರ್ಗ – ಕನಿಷ್ಠ 25 ನೊಂದಾಯಿತ ನೇಕಾರರು – ಕನಿಷ್ಠ 5 ಎಕರೆ ಜಮೀನು
  - ರೂ.100.00 ಲಕ್ಷ
  - ಪ.ಜಾ/ ಪ.ಪಂಗಡ – ಕನಿಷ್ಠ 15 ನೊಂದಾಯಿತ ಪ.ಜಾ / ಪ.ಪಂ ನೇಕಾರರು – ಕನಿಷ್ಠ 2 ಎಕರೆ ಜಮೀನು – ಗರಿಷ್ಠ ರೂ.300.00 ಲಕ್ಷ / ಯೋಜನಾ ವೆಚ್ಚದ ಶೇ.90 ರಷ್ಟು ಯಾವುದು ಕಡಿಮೆಯೋ ಅದು.

2. **ಸೈಜಿಂಗ್ ಘಟಕ ಸ್ಥಾಪನೆ**

ಸೈಜಿಂಗ್ ಅನುಭವ ಹೊಂದಿರುವ ನೇಕಾರರ ನೊಂದಾಯಿತ ಎಸ್.ಪಿ.ವಿ ಮೂಲಕ ವಿದ್ಯುತ್ ಮಗ್ಗ ಕ್ಲಸ್ಟರ್/ ವಿದ್ಯುತ್ ಮಗ್ಗ ಸಾಂದ್ರತೆಯಿರುವ ಪ್ರದೇಶಗಳಲ್ಲಿ ಸೈಜಿಂಗ್ ಘಟಕ ಸ್ಥಾಪಿಸಲು ಘಟಕ ವೆಚ್ಚ & ಸರ್ಕಾರದ ಸಹಾಯಧನ ಸಾಮಾನ್ಯ ವರ್ಗ – ರೂ.300.00 ಲಕ್ಷ / ಯೋಜನಾ ವೆಚ್ಚದ ಶೇ.50 ರಷ್ಟು ಯಾವುದು ಕಡಿಮೆಯೋ ಅದು. ಸರ್ಕಾರದ ಸಹಾಯಧನ – ಪ.ಜಾ/ಪ.ಪಂಗಡ – ಗರಿಷ್ಠರೂ.500.00 ಲಕ್ಷ / ಯೋಜನಾ ವೆಚ್ಚದ ಶೇ.90 ರಷ್ಟು ಯಾವುದು ಕಡಿಮೆಯೋ ಅದು.

3. **ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆ**

ಪ್ರೊಸೆಸ್ಸಿಂಗ್ ಅನುಭವ ಹೊಂದಿರುವ ನೊಂದಾಯಿತ ಎಸ್.ಪಿ.ವಿ ಮೂಲಕ ವಿದ್ಯುತ್ ಮಗ್ಗ ಕ್ಲಸ್ಟರ್ / ವಿದ್ಯುತ್ ಮಗ್ಗ ಸಾಂದ್ರತೆಯಿರುವ ಪ್ರದೇಶಗಳಲ್ಲಿ ಪ್ರೊಸೆಸ್ಸಿಂಗ್ ಘಟಕ ಸ್ಥಾಪಿಸಲು ಸರ್ಕಾರದ ಸಹಾಯಧನ - ಗರಿಷ್ಠ ರೂ.500.00 ಲಕ್ಷ / ಯೋಜನಾ ವೆಚ್ಚದ ಶೇ.50 ರಷ್ಟು ಯಾವುದು ಕಡಿಮೆಯೋ ಅದು.

4. **ಉಣ್ಣೆ ವಲಯ ಅಭಿವೃದ್ಧಿ:**

ಉಣ್ಣೆ ವಲಯದ ಪುನಶ್ಚೇತನಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಉಣ್ಣೆ ಕತ್ತರಿಸುವ ಯಂತ್ರ, ಉಣ್ಣೆ ಕತ್ತರಿಸುವ ಟೇಬಲ್ / ಪೀಠೋಪಕರಣ, ಉಣ್ಣೆ ಸಾಗಣಿಕೆ ವಾಹನ, ಕಾರ್ಡಿಂಗ್ ಮೆಷಿನ್ ಖರೀದಿಸಲು ಹಾಗೂ ಉಣ್ಣೆ ಸಂಗ್ರಹಣ ಉಗ್ರಾಣ, ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಿಸಲು ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಒದಗಿಸಲಾಗುವುದು.

5. **ಮಗ್ಗ ಪೂರ್ವ ಸೌಲಭ್ಯ:**

ಪ.ಜಾ/ಪ.ಪಂ ನೇಕಾರರ ಸಹಕಾರ ಸಂಘಗಳಿಗೆ ಮಗ್ಗ ಪೂರ್ವ ಸೌಲಭ್ಯಗಳಿಗೆ ಸಹಾಯಧನ ಒದಗಿಸಲಾಗುವುದು.

- ಘಟಕ ವೆಚ್ಚ ರೂ.6.00 ಲಕ್ಷ
- ಸರ್ಕಾರದ ಸಹಾಯಧನ - ರೂ.6.00 ಲಕ್ಷ

6. **ಎಕ್ಸ್‌ಪ್ರೆಸ್ ಫೀಡರ್**

ವಿದ್ಯುತ್‌ಮಗ್ಗ ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿ / ನೇಕಾರರ ಕಾಲೋನಿಯಲ್ಲಿ ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪಾದನಾ ಚಟುವಟಿಕೆಗೆ ನಿರಂತರ ವಿದ್ಯುತ್ ಒದಗಿಸಲು ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳ ಮೂಲಕ ಸ್ಥಳೀಯ ವಿದ್ಯುತ್ ಸರಬರಾಜು ಕಂಪನಿಯಿಂದ ಎಕ್ಸ್‌ಪ್ರೆಸ್ ಫೀಡರ್ ಅಳವಡಿಸಲು ಅನುದಾನವನ್ನು ಒದಗಿಸಲಾಗುವುದು.

**ಜವಳಿ ನೀತಿ ಯೋಜನೆಯಡಿ**

1] ಸ್ಥಿರ ಆಸ್ತಿಗಳ ಮೇಲೆ ಸಾಲಸಂಪರ್ಕ ಬಂಡವಾಳ ಸಹಾಯಧನ

| ವಲಯ. | ಜವಳಿ | | ಸಿದ್ಧ ಉಡುಪು |
|---|---|---|---|
| | ಸಣ್ಣ ಮತ್ತು ಅತಿ ಸಣ್ಣ | | ಸಣ್ಣ ಮತ್ತು ಅತಿ ಸಣ್ಣ |
| | ಥ್ರಸ್ಟ್ ವಲಯ | ಇತರೆ | ಇತರೆ |
| 1 | 30% | 25% | 25% |
| 2 | 25% | 20% | 20% |
| 3 | 20% | 15% | 15% |

ಟಿಪ್ಪಣಿ:

ಸಾಲಾಧಾರಿತ ಬಂಡವಾಳ ಸಹಾಯಧನಕ್ಕೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ/ ವಿಕಲಚೇತನರು/ ಅಲ್ಪಸಂಖ್ಯಾತರು/ಮಾಜಿ ಸೈನಿಕರು/ ಮಹಿಳೆಯರ ಫಲಾನುಭವಿಗಳ ಸ್ಥಿರಾಸ್ತಿಗಳ ಮೇಲೆ ಶೇ.5 ರಷ್ಟು ಹೆಚ್ಚುವರಿ ಸಹಾಯಧನ ನೀಡಲಾಗುವುದು.

2] ವಿದ್ಯುತ್‌ಛಕ್ತಿ ಮರುಪಾವತಿ ಸಹಾಯಧನ

- ಎಂ.ಎಸ್.ಎಂ.ಇ ಮತ್ತು ದೊಡ್ಡ ಉದ್ಯಮಗಳು
  ಪ್ರತಿ ಯುನಿಟ್‌ಗೆ ರೂ.2/- ರಂತೆ ಮೊದಲ 5 ವರ್ಷಗಳ ಅವಧಿಗೆ ವಿದ್ಯುತ್‌ಛಕ್ತಿ ಸಹಾಯಧನ ಮರುಪಾವತಿಸಲಾಗುವುದು.

W

- ಸಿದ್ಧ ಉಡುಪು: ಪ್ರತಿ ಯುನಿಟ್‌ಗೆ ರೂ.1/- ರಂತೆ ಮೊದಲ 5 ವರ್ಷಗಳ ಅವಧಿಗೆ ವಿದ್ಯುತ್‌ಚ್ಛಕ್ತಿ ಸಹಾಯಧನ ಮರುಪಾವತಿಸಲಾಗುವುದು.
- ಸಾಂಪ್ರದಾಯಿಕವಲ್ಲದ ನವೀಕರಿಸಬಹುದಾದ ಶಕ್ತಿಯ ಮೂಲ: ಪ್ರತಿ ಯುನಿಟ್‌ಗೆ ರೂ.2/- ರಂತೆ ಮೊದಲ 5 ವರ್ಷಗಳ ಅವಧಿಗೆ ವಿದ್ಯುತ್‌ಚ್ಛಕ್ತಿ ಸಹಾಯಧನ ಮರುಪಾವತಿಸಲಾಗುವುದು. (ವಲಯ-4 ಹೊರತುಪಡಿಸಿ ಎಲ್ಲಾ ವಲಯಗಳಿಗೆ)

3] ಇ.ಎಸ್.ಐ & ಇ.ಪಿ.ಎಫ್ ಮರುಪಾವತಿ ಸಹಾಯಧನ (ಎಂ.ಎಸ್.ಎಂ.ಇ)
ಜವಳಿ (ಥ್ರಸ್ಟ್ ವಲಯ ಮತ್ತು ಇತರೆ) ಸಿದ್ಧ ಉಡುಪು ಘಟಕಗಳಿಗೆ
ಉದ್ಯೋಗದಾತರು ಪಾವತಿಸುವ ಇಪಿಎಫ್ ಮತ್ತು ಇಎಸ್‌ಐ ವಂತಿಕೆಯ ಶೇ.75 ರಷ್ಟು ಸಹಾಯಧನವನ್ನು 5 ವರ್ಷಗಳ ಅವಧಿಗೆ ಮರುಪಾವತಿಸಲಾಗುವುದು.
(ವಲಯ-4 ಹೊರತುಪಡಿಸಿ ಎಲ್ಲಾ ವಲಯಗಳಿಗೆ)

4] ಮುದ್ರಾಂಕ ಶುಲ್ಕ ವಿನಾಯಿತಿ & ನೋಂದಣಿ ಶುಲ್ಕ ರಿಯಾಯಿತಿ:
ಎಂ.ಎಸ್.ಎಂ.ಇ & ದೊಡ್ಡ ಉದ್ಯಮಗಳು
ಮುದ್ರಾಂಕ ಶುಲ್ಕ ವಿನಾಯಿತಿ & ನೋಂದಣಿ ಶುಲ್ಕ ಪ್ರತಿ ರೂ.1000/- ಕ್ಕೆ ರೂ.1/- ರಂತೆ ಪಾವತಿಸಲು ರಿಯಾಯಿತಿ ನೀಡಲಾಗುವುದು.
(ವಲಯ-4 ಹೊರತುಪಡಿಸಿ ಎಲ್ಲಾ ವಲಯಗಳಿಗೆ)

5] ಅಸ್ತಿತ್ವದಲ್ಲಿರುವ ಮತ್ತು ಹೊಸ ಘಟಕಗಳಿಗೆ ಎಫ್ಲುಯೆಂಟ್ ಟ್ರೀಟ್‌ಮೆಂಟ್ ಸ್ಥಾವರ (ಜವಳಿ ಘಟಕಗಳಿಗೆ)
ರಾಜ್ಯದಲ್ಲಿ ಸ್ಥಾಪಿತವಾಗಿರುವ/ ಸ್ಥಾಪಿತವಾಗುವ ಸಮಗ್ರ ಮತ್ತು ಸಂಸ್ಕರಣ ಘಟಕಗಳಲ್ಲಿ ಸ್ಥಾಪಿಸಲ್ಪಡುವ ಎಫ್ಲುಯೆಂಟ್ ಟ್ರೀಟ್‌ಮೆಂಟ್ ಸ್ಥಾವರದ ಸ್ಥಿರಾಸ್ತಿ ಬಂಡವಾಳದ ಮೇಲೆ ಶೇ.50 ರಷ್ಟು ಅಥವಾ ರೂ.5.00 ಕೋಟಿ ಇದರಲ್ಲಿ ಯಾವುದು ಕಡಿಮೆಯೋ ಆ ಸಹಾಯಧನವನ್ನು ನೀಡಲಾಗುವುದು.

ಅಪರ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ